**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**

**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸೆಷನ್ಸ್ ಕೇಸ ನಂಃ 398/2019

ಪಿಡಬ್ಲು :7 ಸಿಡಬ್ಲು :5

| | | |
|---|---|---|
| ಸಾಕ್ಷಿಯ ಹೆಸರು | : | ಶ್ರೀಮತಿ. ಶ್ರೀದೇವಿ ಹುಲ್ಯಾಳ |
| ಗಂಡನ ಹೆಸರು | : | ಶ್ರೀ.ಸುಭಾಷ ಹುಲ್ಯಾಳ |
| ವಯಸ್ಸು | : | 37 ವರ್ಷ |
| ಉದ್ಯೋಗ | : | ಕೂಲಿ ಕೆಲಸ |
| ವಾಸ್ತವ್ಯ | : | ಶೆಡಬಾಳ |
| ದಿನಾಂಕ | : | 12-03-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಚಾಸಾಃ 1 ಮಹಾದೇವಿ, ಚಾಸಾಃ 4 ಶೋಭಾ, ಚಾಸಾಃ 6 ಸುಜಾತಾ, ಚಾಸಾಃ7 ಚಿದಾನಂದ, ಚಾಸಾಃ 8 ಯಲ್ಲವ್ವ , ಚಾಸಾಃ 9 ಶಾರಕ್ಕಾ , ಚಾಸಾಃ 10 ಪಾರ್ವತಿ ಚಾಸಾಃ11 ರಾಯಪ್ಪ ನನಗೆ ಗೊತ್ತಿರುತ್ತಾರೆ. 1 ರಿಂದ 3 ನೇ ಆರೋಪಿತರು ನನಗೆ ಗೊತ್ತಿರುತ್ತಾರೆ. ಅವರೆಲ್ಲರೂ ನಮ್ಮ ಊರಿನವರು. ಉಳಿದ ಆರೋಪಿತರು ಎಲ್ಲರೂ ಗೊತ್ತಿರುತ್ತಾರೆ, ಅವರು ನಮ್ಮ ಊರಿನವರು.

2. ಈಗ 6 ವರ್ಷಗಳ ಹಿಂದೆ ನಾನು, ಸುಜಾತಾ ಮತ್ತು ಅವರ ಗಂಡ ಸಂತೆಗೆ ಹೋಗಿದ್ದೇವು. ರಾತ್ರಿ 9:00 ಗಂಟೆಗೆ ಮನೆಗೆ ವಾಪಸ್ಸು ಬಂದಿದ್ದೇವು. ಮಹಾದೇವಿ ಅವರ ಮನೆ ಮುಂದೆ ಗಲಾಟೆ ನಡೆದಿತ್ತು, ಅವರ ಮನೆಯ ಪಕ್ಕದಲ್ಲಿ ನಮ್ಮ ಮನೆ ಇದೆ. ನಾವು ಗಲಾಟೆ ಸ್ಥಳಕ್ಕೆ ಹೋದೆವು, ಅಲ್ಲಿ 11 ಜನ ಆರೋಪಿತರು ಇದ್ದರು, ಶಿವಾನಂದ ಮಾಕನ್ನವರ ಇವರು ಮಹಾದೇವಿಯವರನ್ನು ಹಿಡಿದು ಜಗ್ಗಾಡಿ, ಮಹಾದೇವಿಯ

ಕೋರಳಿನಲ್ಲಿದ್ದ ಬೋರಮಾಳ ಕಿತ್ತುಕೊಂಡರು. ಅಲ್ಲಿ ಗಲಾಟೆ ಮಾಡುತ್ತಿದ್ದರು. ಆ ಸಮಯದಲ್ಲಿ ಕಾಗವಾಡ ಪೋಲಿಸರು ಅಲ್ಲಿಗೆ ಬಂದರು, ನಂತರ ಎಲ್ಲರೂ ಓಡಿ ಹೋದರು. ಸ್ಥಳದಲ್ಲಿ ಮಹಾದೇವಿಯವರ ತಾಯಿ ಮತ್ತು ಸಣ್ಣ ಸಣ್ಣ ಮಕ್ಕಳಿದ್ದರು. ಗಲಾಟೆ ಹಿಂದಿನ ದಿನ ಚಿದಾನಂದ ರವರು ಕೆಲಸಕ್ಕೆ ಕರೆದುಕೊಂಡು ಹೋಗಿಲ್ಲ ಎಂದು ಸದಾನಂದ, ಮಹೇಶ ಮತ್ತು ರೂಪೇಶ ಇವರು ಚಿದಾನಂದನಿಗೆ ಹೊಡೆಯುತ್ತಿದ್ದರು. ಮಹಾದೇವಿಯವರು ಅದನ್ನು ಬಿಡಿಸಿಕೊಳ್ಳಲು ಹೋಗಿದ್ದರು ಎನ್ನುವ ಕಾರಣಕ್ಕೆ ಅರೋಪಿತರೆಲ್ಲರೂ ಮಹಾದೇವಿಗೆ ಹೊಡೆಯುತ್ತಿದ್ದರು. ಈ ವಿಷಯವನ್ನು ನಾನು ಪೋಲಿಸರ ಮುಂದೆ ಹೇಳಿದ್ದೇನೆ. ನಾನು 11 ಜನ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ ಎಂದು ಹೇಳಿ ನ್ಯಾಯಾಲಯದ ಮುಂದೆ ಹಾಜರಾಗಿರುವ 11 ಜನ ಆರೋಪಿತರನ್ನು ಗುರುತಿಸಿದ್ದಾರೆ .

**ಪಾಟೀ ಸವಾಲು: 5,6 ಮತ್ತು 8 ನೇ ಆರೋಪಿತರ ಪರ ಶ್ರೀ.ಎ.ಸಿ.ಪಿ ವಕೀಲರಿಂದ**

ನಾನು ಶೆಡಬಾಳದಲ್ಲಿ ಸಣ್ಣವಳಿದ್ದಾಗಿನಿಂದ ಇದ್ದು, ಮದುವೆ ಆದ ನಂತರ ನಾನು ಗಂಡನ ಮನೆಗೆ ಹೋಗಿದ್ದು, ನನ್ನ ಗಂಡ ತೀರಿಕೊಂಡ ನಂತರ ಶೆಡಬಾಳದಲ್ಲಿ ನನ್ನ ತವರು ಮನೆಯಲ್ಲಿ 23 ವರ್ಷಗಳಿಂದ ಇದ್ದೇನೆ. ನಮ್ಮ ಮನೆಯಲ್ಲಿ ನಾನು, ನನ್ನ ತಾಯಿ ವಾಸವಾಗಿದ್ದೇವೆ. ನನ್ನ ತಂದೆಯ ಹೆಸರು ಸತ್ಯಪ್ಪ. ನನ್ನ ತಂದೆಗೆ ಇಬ್ಬರು ಜನ ಹೆಂಡತಿಯರು ಇದ್ದಾರೆ. ಅವರುಗಳೆಂದರೆ ಶಿವಬಾಯಿ ಮತ್ತು ಲಕ್ಕವ್ವ. ಚಾಸಾಃ 1 ಮಹಾದೇವಿ ಇವರು ಲಕ್ಕವ್ವ ಇವರ ಮಗಳು. ನಾನು ಶಿವಬಾಯಿ ರವರ ಮಗಳು. ಈರಪ್ಪ ಎನ್ನುವವರು ನನ್ನ ಚಿಕ್ಕಪ್ಪ. ಅವರ ಮಗಳು ಮಹಾದೇವಿ ಮಾಕನ್ನವರ, ಅವರು ಪಟ್ಟಣ ಪಂಚಾಯತಿ ಅಧ್ಯಕ್ಷರು ಎನ್ನುವುದು ಸರಿ. ನಾನು ಗಾಂವ್‌ಠಾಣಾದಲ್ಲಿ ವಾಸವಾಗಿದ್ದೇನೆ. ನಾನು ಮತ್ತು ಚಾಸಾಃ 1 ರವರು ಅಕ್ಕ ಪಕ್ಕದ ಮನೆಯಲ್ಲಿ ವಾಸವಾಗಿದ್ದೇವೆ. 200 ರಿಂದ 300 ವಾಸದ ಮನೆಗಳು ಗಾಂವ್ ಠಾಣಾದಲ್ಲಿ ಇವೆ.

2. ನಾವು ಸಂತೆಗೆ ಶಿಡಬಾಳಕ್ಕೆ ಹೋಗಬೇಕು . ಅದು ನಮ್ಮ ಊರಿನಿಂದ 2 –3 ಕಿಲೋಮೀಟರ ದೂರದಲ್ಲಿ ಇದೆ. ನಾನು ಮತ್ತು ಚಾಸಾಃ 6 ಸುಜಾತಾ ಸಂತೆಗೆ ಹೋಗಿದ್ದೇವು. ನಾವು ಸಂಜೆ 06:00 ಗಂಟೆಗೆ ಹೋಗಿ ರಾತ್ರಿ 09:00 ಗಂಟೆಗೆ ಮನೆಗೆ ಬಂದೇವು. ನಮ್ಮ ಮನೆಗೆ ಹೋಗುವ ರಸ್ತೆ ಶಿರಗುಪ್ಪಿ ರಸ್ತೆ. 1, 2 ಮತ್ತು 3ನೇ ಆರೋಪಿತರು ಮಾವಿನಕೆರೆಯಲ್ಲಿ ವಾಸವಾಗಿದ್ದಾರೆ. ಉಳಿದ ಆರೋಪಿತರು ಕಲ್ಲಾಳ ಗ್ರಾಮದಲ್ಲಿ ವಾಸವಾಗಿದ್ದಾರೆ. ಅದು ನಮ್ಮ ಊರಿನಿಂದ 6 – 7 ಕಿಲೋಮೀಟರ ದೂರದಲ್ಲಿ ಇದೆ.

3. ಜಗಳ ಆದ ವಿಚಾರ ನನಗೆ, ಚಾಸಾಃ 1 ಮಹಾದೇವಿ 10 ದಿನಗಳ ನಂತರ ಹೇಳಿದಳು. ಜಗಳ ಆದ ಬಗ್ಗೆ ನನಗೆ ಆರೋಪಿತರು ಭೇಟಿ ಆಗಿರುವುದಿಲ್ಲ. ಜಗಳ ಆದ ವಿಚಾರವನ್ನು ಊರಿನ ಹಿರಿಯರಿಗೆ, ಮಹಾದೇವಿ ಮಾಕನ್ನವರ ಪಂಚಾಯತಿ ಅಧ್ಯಕ್ಷರು ಅವರು ನನಗೆ ಹೇಳಿರುವುದಿಲ್ಲ. ನಾನಾಗಲೀ ಅಥವಾ ಚಾಸಾಃ 1 ಮಹಾದೇವಿ ರವರಾಗಲೀ ಜಗಳ ಆದ ಬಗ್ಗೆ ಆರೋಪಿತರ ಮನೆಯವರಿಗೆ ಜಗಳದ ಬಗ್ಗೆ ಹೇಳಿರುವುದಿಲ್ಲ.

4. ಕೆಲಸದ ವಿಚಾರವಾಗಿ ಆರೋಪಿತರಾಗಲೀ ಅಥವಾ ಚಿದಾನಂದರವರಾಗಲೀ ನನಗೆ ಹೇಳಿರುವುದಿಲ್ಲ. ಇಂದು ನನ್ನೊಂದಿಗೆ ಚಾಸಾಃ 1 ಮಹಾದೇವಿಯವರು ಬಂದಿದ್ದಾರೆ ಎನ್ನುವುದು ಸರಿ. ಆರೋಪಿತರು ಮಹಾದೇವಿರವರಿಗೆ ಹೊಡೆಯುವುದನ್ನು, ಬಡಿಯುವುದನ್ನು ನಾನು ನೋಡಿಲ್ಲ ಎಂದು ಸೂಚಿಸುವುದು ಸರಿ .

5. ಶಿವಾನಂದ ರವರು ಮಹಾದೇವಿಯವರ ಬೋರಮಾಳವನ್ನು ತೆಗೆದುಕೊಂಡಿದ್ದನು ನಾನು ನೋಡಿದ್ದೇನೆ. ಶಿವಾನಂದ ಇವರು ಮಹಾದೇವಿಯ ಬೋರಮಾಳನ್ನು ಕೈಯಿಂದ ಹಿಡಿದು ಜಗ್ಗಿ ಎಳೆದರು, ಆ ರೀತಿ ಎಳೆದಾಗ ಹರಳುಗಳು

ಕೆಳಗೆ ಬಿದ್ದು ಹೋಗಿಲ್ಲ . ಗಲಾಟೆ ಆಗುತ್ತಿದ್ದ ಸಮಯದಲ್ಲಿ ನಾವು ಚೀರಾಡಿ ಯಾರನ್ನೂ ಕರೆದಿರುವುದಿಲ್ಲ. ಮಹಾದೇವಿಯವರಿಗೆ ಏನಾದರೂ ಕುತ್ತಿಗೆಗೆ ಗಾಯವಾಗಿದ್ದನ್ನು ನಾನು ನೋಡಿಲ್ಲ. ಆರೋಪಿತರ ಹೆಸರನ್ನು ನನಗೆ ಹೇಳಲು ಬರುವುದಿಲ್ಲ ಎನ್ನುವುದು ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತಹ ಘಟನೆ ಆಗಿಲ್ಲ, ಚಾಸಾಃ 1 ಮಹಾದೇವಿ ಪಂಚಾಯತಿ ಅಧಕ್ಷರವರು ಹೇಳಿದಂತೆ ನಾನು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಾನು ನ್ಯಾಯಾಲಯದಲ್ಲಿ ಈ ವಿಚಾರವನ್ನು ಹೇಳುತ್ತಿದ್ದು, ಈ ಮೊದಲು ಎಲ್ಲಿಯೂ ಹೇಳಿಲ್ಲ ಎನ್ನುವುದು ಸರಿಯಲ್ಲ. ಆರೋಪಿತರು ಚಿದಾನಂದರವರಿಗೆ ಹೊಡೆಯುುತ್ತಿದ್ದನು ನಾನು ನೋಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲು: 1 ರಿಂದ 3 ನೇ ಆರೋಪಿತರ ಪರ ಶ್ರಿ.ಬಿ.ಎ.ಎಮ್ ವಕೀಲರಿಂದ,**

6. 1ನೇ ಅರೋಪಿ ನನ್ನ ದೂರದ ಸಂಬಂಧಿಕರು ಎನ್ನುವುದು ಸರಿ. 1 ಮತ್ತು 2ನೇ ಆರೋಪಿತರು ನಮ್ಮ ಮನೆಗೆ ಹೋಗಿ ಬಂದು ಮಾಡುತ್ತಾರೆ ಎನ್ನುವುದು ಸರಿಯಲ್ಲ. 1 ಮತ್ತು 2ನೇ ಆರೋಪಿತರು ಚಾಸಾಃ 7 ಚಿದಾನಂದ ರವರ ಜೊತೆಗೆ ಕೆಲಸಕ್ಕೆ ಹೋಗುತ್ತಾರೆ ಎನ್ನುವುದು ಸರಿಯಲ್ಲ. ಘಟನೆಯನ್ನು ನಾನು ನೋಡಿಲ್ಲ ಎನ್ನುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ನೋಡಿದ್ದೇನೆ ಎಂದು ಹೇಳಿದ್ದಾರೆ. ಘಟನೆ ಆಗಿಲ್ಲ ಎನ್ನುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ಘಟನೆ ಆಗಿದೆ ಎಂದು ಹೇಳಿದ್ದಾರೆ.

**ಪಾಟೀ ಸವಾಲು: 4, 7, 9 ರಿಂದ 13 ನೇ ಆರೋಪಿತರ ಪರ ಶ್ರಿ.ಎಸ್.ಬಿ.ಆರ್ ವಕೀಲರಿಂದ**

5,6 ಮತ್ತು 8 ನೇ ಆರೋಪಿತರ ಪರ ಶ್ರೀ.ಎ.ಸಿ.ಪಿ ವಕೀಲರು ಮಾಡಿದ ಪಾಟೀ ಸವಾಲನ್ನು ತಮ್ಮ ಪಾಟೀ ಸವಾಲು ಎಂದು ಅಳವಡಿಸಿಕೊಂಡಿದ್ದಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.